ಯಿಷ್ ಮಾಡಲ್ಪಟ್ಟ ಮೈಸೂರು ಗವರ್ನ್‌ಮೆಂಟಿನವರ 1907ನೆ ಇಸವಿ ಫೆಬ್ರವರಿ ಮಾಹೆ 28ನೆ ಮಾರ್ಕಂ ಫೈನಾನ್ಸ್ 6501-ಸಿ. ಆರ್. 58-06ನೆ ನಂಬರ್ ಇಸ್ತಿಹಾರ್‌ನ್ನು ಹಾಜ್ನಾಮೆಯ ಪ್ರಕಾರ ಬಾಲಘಾಟ್‌ನಿಂದ ಬೆಂಗಳೂರಿನ ಸಿವಿಲ್ ಮಿಲಿಟರಿ ಸ್ಟೇಷನ್ ದೇವೀಪ್ಸ್ ಮೈಸೂರು ಸಂಸ್ಥಾನದಲ್ಲಿ ಮೂರು ವರುಷಗಳ ಕಾಲ ಅಂದರೆ 1907ನೆ ಇಸವಿ ಜುಲೈ 1ನೆ ತಾರೀಖು ಮೊದಲು 1910ನೆ ಇಸವಿ ಜುಲೈ 30ನೆ ತಾರೀಖು ಪರಿಯಂತ ಮೇಲ್ಕಂಡ ಇಸ್ತಿಹಾರ್‌ನಲ್ಲಿ ನಮೂದಾದ ಪದಾರ್ಥಗಳು ವಗೈರೆ ಪಿಡಿಂಬಡಿಕೆಗಳಿಗೆ ಬಳಪಟ್ಟು ಪದಾರ್ಥವು ಬಳಕೆಯಾಗಬೇಕಾದ ಇತರ ಸಾರಾಯಿಗಳನ್ನು ತಯಾರ್ಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಗೆ ಧರಖಾಸ್ತು ಮಾಡುತ್ತೇನೆ.

2. ನಾನು ಈ ಕೆಳಗೆ ನಮೂದಿಸುವ ಫೀಸುಗಳು ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ತಯಾರ್ಮಾಡಿ ಒದಗಿಸುವುದಕ್ಕೆ ಇದರ ದೆಸೆಯಿಂದ ಒಪ್ಪುತ್ತೇನೆ.

	ರೂ.	ಆ.	ಪೈ.
20 ಡಿಗ್ರಿ ಸಾರಾಯಿಗೆ ಗ್ಯಾಲ್ ಒಂದಕ್ಕೆ ದರ.			
ಕಾಕಂಬಿ ಸಾರಾಯಿಗೆ			
ಈಚಲ್ಲಿನ ಬೆಲ್ಲದ ಸಾರಾಯಿಗೆ ...	} ಕಂಟ್ರಾಕ್ಟಿನ ಪೂರಾ ಕಾಲಕ್ಕೆ		
ತಾಟಿ ಬೆಲ್ಲದ ಸಾರಾಯಿಗೆ ...			

3. ನಾನು ಸದರೀ ಇಸ್ತಿಹಾರಿನ 6ನೆ ಪ್ಯಾರಾದಲ್ಲಿ ಕಂಡ ಪ್ರಕಾರ ದಿವಾಣರವರ ಹೆಸರಿಗೆ ಕ್ರಮಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ 5,000 ರೂಪಾಯಿಗಳ _____ನ್ನು ಮಲಪೂಫ್ ಮಾಡಿರುತ್ತೇನೆ.

ಹೀಗೆ ಇರುವ
ತಮ್ಮ ವಿಧೇಯ ಸೇವಕನಾದ,

ತಾರೀಖು } ವಿಳಾಸ

ತಾರೀಖು 28ನೆ ಫೆಬ್ರವರಿ 1907.

ನಂ. ಕ. 7859-ಫಾರಸ್ಸು 160-06-2, 1900ನೆ ಇಸವಿಯ 11ನೆ ನಂಬರ್ ಮೈಸೂರು ಸೀಮೆಯ ಫಾರಸ್ಸು ರೆಗ್ಯುಲೇಷ್ 4ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಇದರಡಿ ಕಂಡ ಪಟ್ಟಿಯಲ್ಲಿ ನಮೂದಿಸಿರುವ ಚಕ್ಕು ಬಂದಿಯುಳ್ಳ ಪ್ರದೇಶವನ್ನು ಸ್ಪೇಟ್ ಫಾರೆಸ್ಟ್‌ನ್ನಾಗಿ ಮಾಡಬೇಕೆಂದು ಉದ್ದೇಶಿಸಲ್ಪಟ್ಟಿರುತ್ತದೆ ಎಂಬದಾಗಿ ಪ್ರಸಿದ್ಧ ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಪಟ್ಟಿ

ತಾಲ್ಲೂಕು	ಹೋಬಳಿ	ಸುಮಾರು ವಿಸ್ತೀರ್ಣ	ಸರ್ವೆ ನಂಬರ್	ಸ್ಥಳ ಮತ್ತು ಚಕ್ಕು ಬಂದಿ.
ಹರಿಯೂರು	ಹರಿಯೂರು	1 ಚದರ ಮೈಲಿ	ಸ್ವಲ್ಪ	ಸ್ಥಳ :—ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಬುಕ್ಕಪಟ್ಟಣ ಸ್ಪೇಟ್ ಫಾರೆಸ್ಟಿಗೆ ಸಂಬಂಧಿಸಿರುವ ಹರಿಯೂರು ತಾಲ್ಲೂಕಿನ ಆಗ್ನೇಯ ಮೂಲೆಯಲ್ಲಿದ್ದೆ. ಉತ್ತರಕ್ಕೆ :—ದಿಂಡಾವರ ಗ್ರಾಮದ ಸರ್ವೆ ನಂಬರು 40ರ ನೈರುತ್ಯ ಮೂಲೆಯಲ್ಲಿ ಹೊರಟು ಎಲ್ಲಿಯಗ್ಗುರುತು ಸರ್ವೆ ನಂಬರು 40, 39, 36, 37, 35, 34, 27 ಮತ್ತು 26 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗಿ ಆಖೈರ್ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಉತ್ತರ ಮಾರ್ಗವಾಗಿ ಸರ್ವೆ ನಂಬರು 26ರ ಪೂರ್ವ ಪಾರ್ಶ್ವವನ್ನೇ ಅನುಸರಿಸಿ ಸರ್ವೆ ನಂಬರು 16ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 16ರ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳನ್ನು ಅನುಸರಿಸಿ ಸರ್ವೆ ನಂಬರು 18ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 18 ಮತ್ತು 7ರ ದಕ್ಷಿಣ ಪಾರ್ಶ್ವವನ್ನು ಅನುಸರಿಸಿ ಆಖೈರ್ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 8ರಲ್ಲಿ ಹಾದು ಸರ್ವೆ ನಂಬರು 8ರ ಪೂರ್ವ ದಿಕ್ಕಿಗೆ ಹೋಗಿ ಸರ್ವೆ 155ನೆ ನಂಬರಿನ ಆಗ್ನೇಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 14 ಫರಲಾಂಗಿನಲ್ಲಿ ಹೋಗುತ್ತದೆ; ತರುವಾಯ ಸರ್ವೆ ನಂಬರು 8ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 155ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 153, 152, 137 ಮತ್ತು 138ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಆಖೈರು ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ :—ತರುವಾಯ ವೋಬಳಾಪುರದ ಸರ್ವೆ ನಂಬರು 14 ಮತ್ತು 13ರ ಮತ್ತು ಕಿಲಾರದಹಳ್ಳಿ ಗ್ರಾಮದ ಸರ್ವೆ ನಂಬರು 25ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮಾವಿನ ಮಡು ಸರ್ವೆ ನಂಬರು 10ರ ವಾಯವ್ಯ ದಿಕ್ಕಿನ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 78ರ ಮಧ್ಯೆ ಹೋಗಿ ಸದರಿ ಗ್ರಾಮದ ಸರ್ವೆ ನಂಬರು 79ರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 79, 30 ಮತ್ತು 27ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ್ ನಂಬರಿನ ನೈರುತ್ಯ

ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 27 ಮತ್ತು 28ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಮತ್ತು ಸರ್ವೆ ನಂಬರು 23 ಮತ್ತು 24ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಬ್ಬೈರ್ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 24ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂಬರು 24, 23 ಮತ್ತು 22ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 18ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಕಿಲಾರದಹಳ್ಳಿ ಸರ್ವೆ ನಂಬರು 25ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂಬರು 23 ಮತ್ತು 27ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಬ್ಬೈರ್ ಸರ್ವೆ ನಂಬರು ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 25ರಲ್ಲಿ ಹಾದು ಸರ್ವೆ ನಂಬರು 26ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 38ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟು ಅದರ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 29, 8 ಮತ್ತು 11 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಬ್ಬೈರು ನಂಬರಿನ ಆಗ್ನೇಯ ಮೂಲಗೆ ಹೋಗುತ್ತದೆ. ತರುವಾಯ ಬುಕ್ಕಪಟ್ಟಣ ಫಾರೆಸ್ಟ್ಟು ಪಶ್ಚಿಮ ಗಡಿ ಮಾರ್ಗವಾಗಿ ಹೋಗುತ್ತದೆ.

ದಕ್ಷಿಣಕ್ಕೆ :—ಬುಕ್ಕಪಟ್ಟಣ ಫಾರೆಸ್ಟ್ಟು ಮತ್ತು ಮಾರೀನದೇವಿ ಗ್ರಾಮದ ಉತ್ತರ ಗಡಿ.

ಪಶ್ಚಿಮಕ್ಕೆ :—ತರುವಾಯ ಮಾವಿನ ಮಡು ಗ್ರಾಮದ ಸರ್ವೆ ನಂಬರು 49 ಮತ್ತು 51ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂಬರು 52ರ ಆಗ್ನೇಯ ಮೂಲೆಗೆ ಹೋಗುತ್ತದೆ, ತರುವಾಯ ಸರ್ವೆ ನಂಬರು 54ರ ದಕ್ಷಿಣ ಪಾರ್ಶ್ವವಾಗಿ ಅದರ ಆಗ್ನೇಯ ಮೂಲೆಗೂ ಮತ್ತು ಸರ್ವೆ ನಂಬರು 54 ಮತ್ತು 6,ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 65ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 65 ಮತ್ತು 64ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 64ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 64 ಮತ್ತು ,ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಬ್ಬೈರ್ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಪಿಲಾಲಿ ಗ್ರಾಮದ ಸರ್ವೆ ನಂಬರು 4ರ ಪೂರ್ವ ಪಾರ್ಶ್ವದ ಉದ್ದಕ್ಕೂ ಮತ್ತು ಸರ್ವೆ ನಂಬರು 4, 86, 84, 82, 72 ಮತ್ತು 71ರ ಉತ್ತರ ಪಾರ್ಶ್ವದ ಉದ್ದಕ್ಕೂ ಸದರಿ ಪಿಲಾಲಿ ಗ್ರಾಮದ ಆಬ್ಬೈರ್ ಸರ್ವೆ ನಂಬರು 71ರ ಉತ್ತರ ದಿಕ್ಕಿನ ಮೂಲೆಯನ್ನು ಸೇರುತ್ತದೆ. ತರುವಾಯ ವೀರಾನಾಗತಿಹಳ್ಳಿ, ಪೂರ್ವದಿಕ್ಕಿನ, ಗಡಿ ಮಾರ್ಗವಾಗಿ ಹೊರಟ ಸ್ಥಳವನ್ನು ಸೇರುತ್ತದೆ.

ಲಕ್ಕೇನಹಳ್ಳಿ ಗ್ರಾಮದ 1, 2, 4, 5, 6, 7, 14, 15, 16, 17, 18, 19, 20, 21, 22, 23, 24, 34, 35, 49, 51, 52, 54, 55 ಮತ್ತು 56 ಸರ್ವೆ ನಂಬರುಗಳು ಫಾರೆಸ್ಟ್ಟು ನೊಳಗೆ ಹಿಡುವಳಿ ನಂಬರುಗಳಾಗಿರುವುದರಿಂದ ಪ್ರದೇಶವು (Enclosure) ಆವರಣವಾಗಿ ಎಣಿಸಲ್ಪಟ್ಟಿದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಕೋ ಆಪರೇಟಿವ್ ಸೊಸೈಟೀಸ್ ಎಂದರೆ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ! ಎಂ. ಶ್ಯಾಮರಾವ್, ಎಂ. ಎ. ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಆದರ ಮೇಲೆ ಅಥವಾ ಅಂಥಾ ಜಂಗಲಿ ಜಮೀನಿನ ಉತ್ಪತ್ತಿಗೆ ಹಕ್ಕಿರುವುದಾಗಿ ಬಾವ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುಪಿಕೆಯನ್ನು ಅವಗಳ ಸ್ವಭಾವ ಮತ್ತು ಪರಿಮಾಣವನ್ನು ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 9ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡೆಸುವುದಕ್ಕೆ ಫಾರೆಸ್ಟ್ಟು ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ರಾಮಡಲೂ, ಚಿತ್ರದುರ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ಟು ಫಾರೆಸ್ಟ್ಟು ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ಟು ಸೆಟ್ಲ್‌ಮೆಂಟ್ ಆಫಿಸರಿಗೆ ಗವರ್ನ್‌ಮೆಂಟ್ ತರಫು ಸಹಾಯ ಮಾಡುವುದಕ್ಕೆ ಹಾಜರಾಗುವುದಕ್ಕಾಗಿ ಮೊಕರರ್ರಾಮಡಲೂ, ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಆಪ್ಪಣೆಯನ್ನು ದಯಮಾಡಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯೂಟಿ ಕಮಿಷನರನ್ನು ಫಾರೆಸ್ಟ್ಟು ಸೆಟ್ಲ್‌ಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನು ಅನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖೆ ಮಾಡುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಮಡುವುದಕ್ಕೂ ಸಹ ಆಪ್ಪಣೆಯನ್ನು ದಯಪಾಲಿಸಿರುತ್ತಾರೆ.

ತಾರೀಖು 5ನೆ ಮಾರ್ಚಿ 1907.

ನಂ. ರೆ. 8010—ಫಾರೆಸ್ಟ್ಟು 138-06—3, 1900ನೆ ಇಸವಿಯ 11ನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ಟು ರೆಗ್ಯುಲೇಷನ್ 4ನೆ ಪ್ರಕರಣವ ವಿಧಿಗಳನ್ನು ಅನುಸರಿಸಿ ಮೈಸೂರು ಸೀಮೆಯ ಶ್ರೀಮರ್ ಮಹಾರಾಜರವರ ಸರ್ಕಾರದವರು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟ್ಟು ಆಗಿ ಎಸ್ಟಡತಕ್ಕದ್ದೆಂದು ಯೋಚಿಸಿ ಇರುತ್ತದೆ ಎಂಬದಾಗಿ ಪ್ರಸಿದ್ಧಪಡಿಸಲು ಆಪ್ಪಣೆ ದಯಪಾಲಿಸಿರುತ್ತಾರೆ :—

ಪಟ್ಟಿ.

ಡಿಸ್ಟ್ರಿಕ್ಟು	ತಾಲ್ಲೂಕು.	ಸರ್ವೆ ನಂಬರು ಮತ್ತು ಹಿಸ್ಸಾ ನಂಬರ್.	ಅಕ್ಕಿನ ಹೆಸರು.	ಸ್ಥಳ ಮತ್ತು ಚಕ್ಕು ಬಂದಿ.
ಕಡೂರು.	ಮೊಡಗೆರೆ	33 ಚದರ ಮೈಲಿಗಳು, 27 ಎಕರೆಗಳು, 20 ಗುಂಟೆಗಳು.	ಬಳ್ಳೂರು.	ಸ್ಥಳ.—ಮೊಡಗೆರೆ ತಾಲ್ಲೂಕು ಬಳ್ಳಳರಾಯನ ದುರ್ಗದಿಂದ ಸೀಸೆಕಲ್ಲು ಬೆಟ್ಟದ ವರೆಗೆ ಉತ್ತರದಿಂದ ದಕ್ಷಿಣಕ್ಕೆ ವ್ಯಾಪಿಸಿ ಹಾಸನ ಡಿಸ್ಟ್ರಿಕ್ಟಿನ ಎಲ್ಲೆಯ ವರೆಗೆ ಬಂದಿರುವ ಪಶ್ಚಿಮ ಘಟ್ಟದ ಫಾರೆಸ್ಟ್ಟಿನ ಸರಹದ್ದು. **ಚಕ್ಕು ಬಂದಿ.** ಉತ್ತರಕ್ಕೆ :—ದುರ್ಗದಹಳ್ಳಿ ಗ್ರಾಮದ ಸರ್ವೆ ನಂಬರು 69ರ ದಕ್ಷಿಣ ಸರಹದ್ದು ಮೂಲೆಯಿಂದ ಬಂದು ಫರ್ಲಾಂಗು ಕೆಳಗೆ ಇರುವ ಸರ್ವೆ ನಂಬರು 66ರ ವಾಯವ್ಯ ಮೂಲೆಯಲ್ಲಿ ದಕ್ಷಿಣ ಕನ್ನಡಾ ಜಿಲ್ಲಾ ಸರಹದ್ದು ಸೇರುವ ಸ್ಥಳದಿಂದ ಎಲ್ಲೆಯ ರೇಖೆಯು ಬಳ್ಳಳರಾಯನ ದುರ್ಗದ ಹಳ್ಳಿ ಕೋಟೆಯ